## ಸ್ಟೈಲಿಶ್ ಮತ್ತು ಮಾಸ್ 'ವಾಸು'

'ಅಕಿರಾ' ಚಿತ್ರದ ಮೂಲಕ ಚಿತ್ರರಸಿಕರಿಗೆ ಪರಿಚಯಗೊಂಡಿದ್ದ ಅನೀಶ್ ತೇಜೇಶ್ವರ್ ಅವರ ಹೊಸ ಚಿತ್ರ 'ವಾಸು ನಾನ್ ಪಕ್ಕಾ ಕಮರ್ಷಿಯಲ್' ಆ. 3ರಂದು ತೆರೆ ಕಾಣುತ್ತಿದೆ. ಹೆಸರಿಗೆ ತಕ್ಕಂತೆ ಸಿನಿಮಾ ಕಮರ್ಷಿಯಲ್ ಅಂಶಗಳಿಂದ ತುಂಬಿತುಳುಕುತ್ತಿದ್ದು, ಅನೀಶ್‌ಗೆ ಈ ಸಿನಿಮಾ ಬ್ರೇಕ್ ನೀಡಲಿದೆ ಎನ್ನುವ ವಿಶ್ವಾಸ ಚಿತ್ರತಂಡದಲ್ಲಿದೆ.

'ವಾಸು' ಚಿತ್ರಕ್ಕಾಗಿ ಅನೀಶ್ ಸಾಕಷ್ಟು ಮುತುವರ್ಜಿ ವಹಿಸಿದ್ದಾರೆ. ದೇಹವನ್ನು ದಂಡಿಸುವ ಮೂಲಕ ತಮ್ಮ ಪಾತ್ರದಲ್ಲಿ ಉತ್ಸಾಹದಿಂದ ತೊಡಗಿಸಿಕೊಂಡಿದ್ದಾರೆ. ಅವರ ಉತ್ಸಾಹಕ್ಕೆ ತಕ್ಕಂತೆ ಗೀತೆಗಳು ಹಾಗೂ ಸಾಹಸ ಸನ್ನಿವೇಶಗಳು ಸೊಗಸಾಗಿ ಮೂಡಿಬಂದಿವೆಯಂತೆ. ನಿಶ್ವಿಕಾ ನಾಯ್ಡು ಚಿತ್ರದ ನಾಯಕಿ. ಉತ್ಸಾಹಿ ತಂಡದೊಂದಿಗೆ ಕೆಲಸ ಮಾಡಿರುವ ಹಿತಾನುಭವ ಅವರದು. ಗ್ಲಾಮರಸ್ ಆಗಿ ಕಾಣಿಸಿಕೊಂಡಿರುವುದರ ಜೊತೆಗೆ ನಟನೆಯ ಪಾಠಗಳನ್ನೂ ಈ ಚಿತ್ರದ ಮೂಲಕ ಕಲಿತಿರುವ ಖುಷಿಯಲ್ಲಿರುವ ನಿಶ್ವಿಕಾ, 'ವಾಸು' ಮೂಲಕ ಮತ್ತಷ್ಟು ಅವಕಾಶಗಳ ನಿರೀಕ್ಷೆಯಲ್ಲಿದ್ದಾರೆ.

ಅಜಿತ್ ವಾಸನ್ 'ವಾಸು' ಚಿತ್ರದ ನಿರ್ದೇಶಕರು. ತಮ್ಮ ಸಿನಿಮಾ ಕೌಟುಂಬಿಕ ಮನರಂಜನೆಯ ರೂಪದಲ್ಲಿ ಎಲ್ಲ ವರ್ಗದ ಪ್ರೇಕ್ಷಕರನ್ನೂ ರಂಜಿಸಲಿದೆ ಎನ್ನುವ ವಿಶ್ವಾಸ ಅವರದು. ಚಿತ್ರದ ನಾಯಕನನ್ನು ಸ್ಟೈಲಿಷ್ ಹಾಗೂ ಮಾಸ್ ಲುಕ್‌ನಲ್ಲಿ ತೋರಿಸಿದ್ದಾರಂತೆ. ದಿಲೀಪ್ ಚಕ್ರವರ್ತಿ ಛಾಯಾಗ್ರಹಣ ಹಾಗೂ ಅಜನೀಶ್ ಲೋಕನಾಥ್ ಸಂಗೀತ ಕೂಡ 'ವಾಸು' ಅದ್ದೂರಿತನಕ್ಕೆ ಪೂರಕವಾಗಿವೆಯಂತೆ.





## ನಿಖಿಲ್ ಮತ್ತು ನೇಟಿವಿಟಿ!

ನಿಖಿಲ್ ಕುಮಾರ್ ನಾಯಕರಾಗಿ ನಟಿಸಿರುವ ಎರಡನೇ ಸಿನಿಮಾ 'ಸೀತಾರಾಮ ಕಲ್ಯಾಣ' ನಿಧಾನವಾಗಿ ಸುದ್ದಿ ಮಾಡುತ್ತಿದೆ. ಕಳೆದ ವಾರವಷ್ಟೇ ರಾಮನಗರದಲ್ಲಿ ಚಿತ್ರದ ಟ್ರೈಲರ್ ಬಿಡುಗಡೆ ಕಾರ್ಯಕ್ರಮ ಅದ್ದೂರಿಯಾಗಿ ನಡೆದಿದೆ.

'ಜಾಗ್ವಾರ್' ಸಿನಿಮಾ ತನ್ನ ಅದ್ದೂರಿತನದಿಂದ ಚಿತ್ರರಸಿಕರ ಗಮನ ಸೆಳೆದಿತ್ತು. ಈ ಚಿತ್ರ ಕೂಡ ಅದ್ದೂರಿತನದಲ್ಲಿ ಕಡಿಮೆಯಿಲ್ಲ. ಆದರೆ, ಸಿನಿಮಾದ ಮುಖ್ಯ ವಿಶೇಷ ಇರುವುದು ಗ್ರಾಮೀಣ ಸೊಗಡಿನಲ್ಲಿ. ಮೊದಲ ಚಿತ್ರದಲ್ಲಿನ ನಿಖಿಲ್ ಅವರ ಪಾತ್ರಕ್ಕೆ ಸಂಪೂರ್ಣ ತದ್ವಿರುದ್ಧವಾದ ಪಾತ್ರವನ್ನು ನಿರ್ದೇಶಕ ಹರ್ಷ ರೂಪಿಸಿದ್ದಾರಂತೆ. 'ಜಾಗ್ವಾರ್' ಸಿನಿಮಾದಲ್ಲಿ ನೇಟಿವಿಟಿಯ ಕೊರತೆಯಿತ್ತು ಎನ್ನುವ ಮಾತುಗಳಿಗೆ 'ಸೀತಾರಾಮ ಕಲ್ಯಾಣ'ದ ಮೂಲಕ ನಿರ್ದೇಶಕರು ಉತ್ತರ ಕೊಡಲು ಹೊರಟಿದ್ದಾರೆ.

ಚೊಚ್ಚಿಲ ಚಿತ್ರದಲ್ಲಿ ನೃತ್ಯ ಹಾಗೂ ಸಾಹಸ ದೃಶ್ಯದ ಸನ್ನಿವೇಶಗಳಲ್ಲಿ ನಿಖಿಲ್ ನೋಡುಗರ ಗಮನಸೆಳೆದಿದ್ದರು. ಈ ಚಿತ್ರದಲ್ಲಿ ಭಾವನಾತ್ಮಕ ದೃಶ್ಯಗಳಲ್ಲಿ ಕೂಡ ಅವರು ಗಮನಾರ್ಹ ಅಭಿನಯ ನೀಡಿದ್ದಾರಂತೆ. 'ಸೀತಾರಾಮ ಕಲ್ಯಾಣ' ಚಿತ್ರವನ್ನು ಒಂದು ಕೌಟುಂಬಿಕ ಚಿತ್ರವಾಗಿ ರೂಪಿಸಲು ಹರ್ಷ ಪ್ರಯತ್ನಿಸುತ್ತಿದ್ದಾರೆ.

ರಚಿತಾ ರಾಮ್ ಚಿತ್ರದ ನಾಯಕಿ. ರವಿಶಂಕರ್, ಮಧುಬಾಲಾ, ಸಾಧು ಕೋಕಿಲ, ಚಿಕ್ಕಣ್ಣ, ಶರತ್ ಕುಮಾರ್ ಅವರನ್ನೊಳಗೊಂಡ ಅನುಭವಿಗಳ ತಾರಾಗಣ ಚಿತ್ರದಲ್ಲಿದೆ. ಸ್ವಾಮಿ ಅವರ ಛಾಯಾಗ್ರಹಣ ಹಾಗೂ ರವಿ ಬಸ್ರೂರು ಸಂಗೀತ ಚಿತ್ರಕ್ಕಿದೆ. ಶೂಟಿಂಗ್ ಕೊನೆಯ ಹಂತದಲ್ಲಿದ್ದು, ದಸರೆ ವೇಳೆಗೆ ಚಿತ್ರವನ್ನು ತೆರೆ ಕಾಣಿಸುವುದು ಚಿತ್ರತಂಡದ ಉದ್ದೇಶ.

■ ರಘು